ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗೌರವಾನ್ವಿತ ಸ್ಥಾನಕ್ಕೆ ಚ್ಯುತಿ ಬರುವ ರೀತಿಯಲ್ಲಿ ನಡೆದುಕೊಳ್ಳಲು ತಯಾರಿಲ್ಲ. ಇಂಥ ವಿಚಾರದಲ್ಲಿ ಬಾವಿಗೆ ಬಂದು ಧರಣಿ ಆಡಲು ನಾವು ತಯಾರಿಲ್ಲವೆಂದು ನಿನ್ನೆ ಸಹ ಹೇಳಿದ್ದೇನೆ. ಅತ್ಯಂತ ವಿನಯ, ಗೌರವ, ನಮ್ರತೆಯಿಂದ ಈ ಮೂರು ಪ್ರಶ್ನೆಗಳಿಗೆ ಇವತ್ತು ಅವಕಾಶ ಕೊಡಿ ಎಂದು ವಿನಂತಿಸಿ ಕೊಳ್ಳುತ್ತಿದ್ದೇನೆ. ಬೇಕಾದರೆ ತಾವು ಹೇಳಿದಂತೆ ಇನ್ನು ಮುಂದೆ ಅದೇ ರೀತಿ ನಡೆದುಕೊಳ್ಳೋಣ. ಇದರ ಮೇಲೆ ತೀರ್ಮಾನ ನೀಡುವುದು ತಮಗೆ ಬಿಟ್ಟಿದ್ದು.

ಅಧ್ಯಕ್ಷರು : ಹಾಗಿದ್ದರೆ ಇವತ್ತು ಒಂದು ಸಲ ಅವಕಾಶ ಕೊಡುತ್ತೇನೆ. ಇನ್ನು ಮುಂದೆ ತಾವು ಇದೇ ರೀತಿ ಕೇಳಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದೊಂದು ಸಲ ಅವಕಾಶ ಕೊಟ್ಟುಬಿಡಿ, ಇನ್ನು ಮೇಲೆ ಕೊಡಲು ಹೋಗಬೇಡಿ.

ಅಧ್ಯಕ್ಷರು : ಇವತ್ತು ಒಂದು ದಿವಸ ಕೇಳಿ, ಇನ್ನು ಮುಂದೆ ಈ ರೀತಿ ಕೇಳಬಾರದು. ನಾನು ಏಕೆ ಹೀಗೆ ಮಾಡಿದೆ ಎಂದರೆ, ಇವತ್ತು ಒಂದು ದಿವಸ ಎಕ್ಸ್‌ಟೆಂಡ್ ಮಾಡಿದರೆ ಪ್ರತಿಯೊಂದು ದಿವಸ ಅರ್ಧಗಂಟೆ, ಒಂದು ಗಂಟೆ ಎಕ್ಸ್‌ಟೆಂಡ್ ಮಾಡಬೇಕಾಗಿ ಬರುತ್ತದೆ. ಆದ್ದರಿಂದ ಮೊದಲನೆಯ ದಿವಸವಾದ ಇವತ್ತು ಮಾತ್ರ ಎಲ್ಲರ ಬೇಡಿಕೆ ಮೇರೆಗೆ ಅವಕಾಶ ಕೊಡುತ್ತಿದ್ದೇನೆ. ನಾಳೆಯಿಂದ ದಯವಿಟ್ಟು ಕೇಳಬೇಡಿ. ಮಾನ್ಯ ಸದಸ್ಯರುಗಳು ಬೇರೆ ಸದಸ್ಯರ ಪ್ರಶ್ನೆ ಬಂದಾಗ ಹೊಂದಾಣಿಕೆ ಮಾಡಿಕೊಂಡರೆ ಎಲ್ಲಾ ಸರಿಯಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತಮ್ಮ ಮಾತೇ ಕೊನೆಯ ಮಾತು, ಅದನ್ನು ನಾವೆಲ್ಲರೂ ಒಪ್ಪುತ್ತೇವೆ. ದಯವಿಟ್ಟು ಇವತ್ತು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಗಲಿ

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಸಿಂಧ್ಯರವರು ಮಾತನಾಡುತ್ತ ಅದು ಸರಿಯಲ್ಲ. ಅದನ್ನು ವಾಪಸ್ ಪಡೆದುಕೊಳ್ಳಬೇಕು

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಗಲಿ ವಾಪಸ್ ಪಡೆಯುತ್ತೇನೆ.

ರಾಜ್ಯದಲ್ಲಿ ಆಶ್ರಯ ಸಮಿತಿಗಳು

58 (17) ಶ್ರೀ ಅಪ್ಪಯ್ಯ ಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ಆಶ್ರಯ ಸಮಿತಿಗೆ ನಾವು ನಿರ್ದೇಶನ ಹೊಂದಿದ ಸದಸ್ಯರ ಅಧಿಕಾರವೇನು;

ಆ) ಸಭೆಯಲ್ಲಿ ಒಮ್ಮತ ಮೂಡದಿದ್ದಾಗ ಅಧ್ಯಕ್ಷರು ಯಾವ ರೀತಿ ನಿರ್ಣಯ ಕೈಗೊಳ್ಳಬಹುದಾಗಿದೆ; ಇದರ ಬಗ್ಗೆ ಕಾನೂನಿನಡಿಯಲ್ಲಿ ಇರುವ ನಿಯಮಗಳೇನು; ವಿವರಣೆ ನೀಡುವುದು;

ಇ) ಗ್ರಾಮ ಸಭೆಗಳು ಗುರುತಿಸಿದಂತಹ ಫಲಾನುಭವಿಗಳನ್ನು ಬಿಟ್ಟು ಸದಸ್ಯರು ಆಯ್ಕೆ ಮಾಡಿದ ಫಲಾನುಭವಿಗಳನ್ನು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿದೆಯೇ; ಇದ್ದಲ್ಲಿ ವಿವರಣೆ ನೀಡುವುದು?

ಶ್ರೀ ಖಿಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ನಾನು ನಿರ್ದೇಶನ ಹೊಂದಿದ ಸದಸ್ಯರು ಆಶ್ರಯ ಅಂಬೇಡ್ಕರ್ ವಸತಿ ಯೋಜನೆಗಳಿಗೆ ಸಂಬಂಧಿಸಿದಂತೆ ಅರ್ಹ ಫಲಾನುಭವಿಗಳ ಆಯ್ಕೆ ಮಾಡುವ ಬಗ್ಗೆ ಸಮಿತಿಯಲ್ಲಿ ಸಲಹೆ ಮತ್ತು ತಮ್ಮ ಅಭಿಮತವನ್ನು ನೀಡಬಹುದಾಗಿರುತ್ತದೆ.

ಆ) ಸಭೆಯಲ್ಲಿ ಒಮ್ಮತ ಮೂಡದಿದ್ದಾಗ ಸಭೆಯ ಬಹುಮತದ ಆಧಾರದ ಮೇಲೆ ನಿರ್ಣಯ ಕೈಗೊಳ್ಳಬಹುದಾಗಿದೆ.

ಇ) ಇಲ್ಲ

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿಯನ್ನು ಮಾಡಿದ್ದಾರೆ. ಇವತ್ತು ಹೊಸ ನೋಟಿಫಿಕೇಷನ್ ಮಾಡಿ ಸಭೆಯಲ್ಲಿ ಒಮ್ಮತ ಮೂಡದಿದ್ದರೆ ಮೆಜಾರಿಟಿಯಂತೆ ನಡೆಯಬೇಕೆಂದು ಹೇಳಿದ್ದಾರೆ. ಹಾಗಿದ್ದರೆ ಶಾಸಕರು ಸಮಿತಿಯ ಅಧ್ಯಕ್ಷರಾಗಿ ಕೂಡ ಪ್ರಯೋಜನವೇನಾಯಿತು? ಮಾನ್ಯ ಖಿರ್ಗಿಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಆಶ್ರಯ ಸಮಿತಿಗಳಿಗೆ ಶಾಸಕರೇ ಅಧ್ಯಕ್ಷರಾಗಬೇಕೆಂದು ಒತ್ತಾಯ ಮಾಡಿದ್ದರು. ಹಾಗಾದರೆ ಇವತ್ತು ಶಾಸಕರು ಆಶ್ರಯ ಸಮಿತಿಯ ಅಧ್ಯಕ್ಷರಾಗಿ ಪ್ರಯೋಜನವೇನು? ನಾಲ್ಕು ಜನರನ್ನು ಆಶ್ರಯ ಸಮಿತಿಯಲ್ಲಿ ನಾಮಕರಣ ಮಾಡುತ್ತಾರೆ, ಮೆಜಾರಿಟಿಯಂತೆ ತೀರ್ಮಾನವೆಂದರೆ ಶಾಸಕರ ಸದಸ್ಯತ್ವವನ್ನು ವಾಪಸ್ ಪಡೆದುಕೊಂಡುಬಿಡಿ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ : ನಾಮಕರಣ ಸದಸ್ಯರ ಮುಂದೆ ಶಾಸಕರು ತಲೆ ಎತ್ತದಂಥ ಪರಿಸ್ಥಿತಿಯನ್ನು ಮಾಡಿಬಿಟ್ಟಿದ್ದಾರೆ.

ಶ್ರೀ ಖಿಮರುಲ್ ಇಲ್ಲಾಂ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವು ಒಂದು ಸುತ್ತೋಲೆಯನ್ನು ಇಶ್ಯೂ ಮಾಡಿದ್ದೇವೆ. ಆಶ್ರಯ ಸಮಿತಿಯಾದಮೇಲೆ ಫಲಾನುಭವಿಗಳನ್ನು ಯಾವ ರೀತಿ ಆಯ್ಕೆ ಮಾಡಬೇಕು, ಯಾವ ಸಭೆಯಲ್ಲಿ ಫಲಾನುಭವಿಗಳನ್ನು ಐಡೆಂಟಿಫೈ ಮಾಡಬೇಕು ಮುಂತಾದ ಬಗ್ಗೆ ಪೂರ್ಣವಾದ ನಿಯಮಾವಳಿಯನ್ನು ಎರಡು ಸುತ್ತೋಲೆಗಳಲ್ಲಿ ಹೊರಡಿಸಿದ್ದೇವೆ. ಪ್ರಕಾರ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಐಡೆಂಟಿಫೈ ಮಾಡಲಾಗುತ್ತದೆ. ಪೂರ್ಣ ಪಟ್ಟಿಯನ್ನು ಗ್ರಾಮಸಭೆಯಲ್ಲೇ ತಯಾರು ಮಾಡಬೇಕು. ಇದು ಮ್ಯಾಂಡೇಟರಿ. ಆನಂತರ ಇದು ಸಿ.ಇ.ಒ. ರವರಿಗೆ ಹೋಗಬೇಕು. This list should go to the CEO and the Ashraya committee which is responsible for selection and not for identification. We have also provided for reservations for SCs/STs etc., in this Circular. The Selection Committed has poer to findout whether they are eligible or not. ಆ ಅಧಿಕಾರ ಸೆಲೆಕ್ಷನ್ ಕಮಿಟಿಗೆ ಇದೆ. Support, there is no consensus.

ಕನ್‌ಸೆಸನ್ ಮಾಡಿ ಮಾಡಬೇಕು. ಅದು ಇಲ್ಲದಿದ್ದರೆ ನಮಗೆ ಸಂವಿಧಾನದಿಂದ ಗೈಡೆನ್ಸ್ ಸಿಗಬೇಕು. ಅದರ ಅನುಸಾರ ನಾವು ಈ ಸುತ್ತೋಲೆಯನ್ನು ಇಶ್ಯೂ ಮಾಡಿದ್ದೇವೆ. ಏಕೆಂದರೆ in democracy, majority always carries the weight. Based on the majority...ಕೇಂದ್ರ ಸರ್ಕಾರದಲ್ಲಿ ಮತ್ತು ಇಲ್ಲಿಯೂ ಮೆಜಾರಿಟಿಯ ಅನುಸಾರ ರೂಲಿಂಗ್‌ಗೆ ಬರುತ್ತದೆ. ಮೆಜಾರಿಟಿ ಬೇಡಬೆಂದರೆ ಅದು ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಎದ್ದು ನಿಂತು ಮಾತನಾಡುತ್ತಿದ್ದೀರಿ ದಯವಿಟ್ಟು ಹಾಗೆ ಮಾಡಬೇಡಿ. ನಾನು ಮಾನ್ಯ ಜಗದೀಶ್‌ಶೆಟ್ಟರ್‌ರವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ನಾನು ಯಾರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ ಅವರು ಮಾತ್ರ ಮಾತನಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ ಅಧ್ಯಕ್ಷರೆ, ಮಾನ್ಯ ಎ.ಬಿ. ಪಾಟೀಲರು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಬಹಳ ಮಹತ್ವದ ಪ್ರಶ್ನೆಯನ್ನು ಎತ್ತಿದ್ದಾರೆ. ಸಹಮತ ಬರದಿದ್ದರೆ ಬಹುಮತದ ಅನುಸಾರ ಫಲಾಗುಭವಿಗಳ ಪಟ್ಟಿಯನ್ನು ಆಶ್ರಯ ಸಮಿತಿಯಲ್ಲಿ ಮಾಡಲಾಗುತ್ತದೆಂದು ಸಚಿವರು ಹೇಳಿದ್ದಾರೆ. ಹಾಗಿದ್ದರೆ ಆಶ್ರಯ ಸಮಿತಿಯ ಅಧ್ಯಕ್ಷರಾಗಿ ಶಾಸಕರಾದ ನಾವೇಕೆ ಇರಬೇಕೆಂದು ಕೇಳುತ್ತಿದ್ದೇವೆ. ಆಶ್ರಯ ಸಮಿತಿ ಕಾಂಗ್ರೆಸ್ ಕಾರ್ಯಕರ್ತರು ಅದರಲ್ಲಿ ಸದಸ್ಯರಾಗಿದ್ದಾರೆ. ವಿರೋಧ ಪಕ್ಷದಲ್ಲಿರುವ ಶಾಸಕರಿಗೆ ಅವರು ಸಹಕಾರವನ್ನು ಕೊಡುತ್ತಿಲ್ಲ. ಹೆಚ್ಚುಕಮ್ಮಿ ಎಲ್ಲಾ ಕ್ಷೇತ್ರಗಳಲ್ಲಿ ಇದೇ ಹಣೆಬರಹವಿದೆ. ತಾವು ಬಹುಮತವೆಂದು ಅವರಿಗೆ ಅಧಿಕಾರ ಕೊಟ್ಟುಬಿಟ್ಟರೆ ಶಾಸಕರಿಗೆ ಯಾವುದೇ ಬೆಲೆ ಇರುವುದಿಲ್ಲ. ಹಾಗಿದ್ದರೆ ನಾವು ಏಕೆ ಅದರ ಅಧ್ಯಕ್ಷರಾಗಬೇಕು? ಗ್ರಾಮ ಸಭೆಯಲ್ಲಿ ನಿಜವಾದ ಪಟ್ಟಿ ತಯಾರು ಆಗುವುದಿಲ್ಲ, ಕಾಂಗ್ರೆಸ್ ಕಾರ್ಯಕರ್ತರೇ ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡತಕ್ಕದ್ದು. ಬಹುಮತದ ಅಧಿಕಾರವನ್ನೇನು ಕೊಟ್ಟಿದ್ದೀರಿ ಅದನ್ನು ತಕ್ಷಣ ವಾಪಸ್ ತೆಗೆದು ಕೊಳ್ಳಬೇಕು; ಇಲ್ಲದಿದ್ದರೆ ತಾವು ನಮ್ಮಗಳ ರಾಜೀನಾಮೆಯನ್ನು ತೆಗೆದುಕೊಂಡುಬಿಡಿ. ನಾವೆಲ್ಲರೂ ಹಿಂದೆ ಬಂದುಬಿಡುತ್ತೇವೆ.

11.40 ಎ.ಎಂ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಾನೂ ಸಹಾ ಎರಡು ಬಾರಿ ಆಶ್ರಯ ಸಮಿತಿಯ ಸಭೆಗಳನ್ನು ನಡೆಸಿದ್ದೇನೆ. ನನ್ನ ಅನುಭವವನ್ನೂ ಕೂಡ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಆಶ್ರಯ ಸಮಿತಿಗಳಿಗೆ ಅಧ್ಯಕ್ಷರಾಗಿ ಕೆಲವು ಕಡೆ ಹಿರಿಯ ಶಾಸಕರುಗಳಿದ್ದರೆ, ಇನ್ನು ಕೆಲವು ಕಡೆ ಕಿರಿಯ ಶಾಸಕರುಗಳಿದ್ದಾರೆ. ಹೋದಸಾರಿ ಕೂಡ ಆಶ್ರಯ ಸಮಿತಿಗಳು ರಚನೆಯಾಗಿ ಕೆಲಸ ಮಾಡಿದವು. ಈಗ ಸರ್ಕಾರ ಆಶ್ರಯ ಸಮಿತಿಗೆ 3-4 ಜನ ಕಾಂಗ್ರೆಸ್ ಕಾರ್ಯಕರ್ತರನ್ನು ನಾಮಿನೇಟ್ ಮಾಡಿದೆ. ಚುನಾಯಿತ ಪ್ರತಿನಿಧಿಗಳಾದ ನಾವು ಲಕ್ಷಾಂತರ ಜನರ ಓಟುಗಳನ್ನು ಪಡೆದು ಗೆದ್ದು ಬಂದಿದ್ದೇವೆ. ಆಶ್ರಯ ಸಮಿತಿಯ ನಿರ್ಣಯಗಳನ್ನು ಅನುಷ್ಠಾನಕ್ಕೆ ತರತಕ್ಕಂತಹ ಜವಾಬ್ದಾರಿ ಸಂಪೂರ್ಣವಾಗಿ ಶಾಸಕರಾದ ನಮ್ಮ ಮೇಲೆಯೇ ಇರುತ್ತದೆ. ಸರ್ಕಾರದ ಗೈಡ್‌ಲೈನ್ಸ್ ಏನಿವೆ ಅದನ್ನು ನಾವು ಒಪ್ಪುತ್ತೇವೆ. ನಾವು ಆ ಗೈಡ್‌ಲೈನ್ಸ್ ಪ್ರಕಾರವೇ ಆಶ್ರಯ ಸಮಿತಿ ಸಭೆಗಳನ್ನು ನಡೆಸಿದರೂ

ಕೂಡ ಅವರು ಉದ್ದೇಶಪೂರ್ವಕವಾಗಿ ಶಾಸಕರಿಂದ ಏನೂ ಕೆಲಸ ಮಾಡಿಸಬಾರದು, ಯಾವುದೇ ಮನೆಗಳನ್ನೂ ಸಹಾ ಅವರು ಹಂಚಬಾರದು ಎಂಬ ಸಂಕುಚಿತ ಭಾವನೆಯನ್ನು ಇಟ್ಟುಕೊಂಡು ಪ್ರತಿಯೊಂದಕ್ಕೂ ಅಡ್ಡಿಪಡಿಸುತ್ತಾರೆ. ಸಮಿತಿಯಲ್ಲಿ ಚುನಾಯಿತ ಪ್ರತಿನಿಧಿ ಅಧ್ಯಕ್ಷನಾಗಿದ್ದರೆ ಬೇರೆ ನಾಮಿನೇಟ್ ಆದವರು 4 ಜನ ಇರುತ್ತಾರೆ. ಬಹುಮತದ ತೀರ್ಪು ಎಂದು ಹೇಳಿದಾಗ ಶಾಸಕರಾದ ನಾವು ಅವರ ಸಮಯಕ್ಕೆ ಬರುತ್ತೇವೆ. ಅವರದ್ದು ಬಹುಮತ ಇರುವುದರಿಂದ ಅವರು ಹೇಳಿದ್ದೇ ನಡೆಯುತ್ತದೆ. ಶಾಸಕರ ಮಾತಿಗೆ ಮನ್ನಣೆ ಇರುವುದಿಲ್ಲ. ಆಗ ನಮ್ಮ ವಿರೊಧ ಪಕ್ಷದವರು ಯಾವುದೇ ಕ್ಷೇತ್ರದಲ್ಲೂ ಒಂದು ಮನೆಯನ್ನೂ ಸಹಾ ಹಂಚುವುದಕ್ಕೆ ಆಗುವುದೇ ಇಲ್ಲ. ನಾನು ನನ್ನ ಅನುಭವದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಈಗಾಗಲೇ ಎರಡು ಸಭೆಗಳನ್ನು ನಡೆಸಿದ್ದೇನೆ. ನಾವು ಎಷ್ಟೇ ನಿಯಮಬದ್ಧವಾಗಿ ಸಭೆಗಳನ್ನು ನಡೆಸಿದರೂ ಕೂಡ ಅವರು ಪ್ರತಿಯೊಂದಕ್ಕೂ ಸಹ ವಿರೋಧ ಮಾಡುತ್ತಾರೆ. ಮಾನ್ಯ ಖರ್ಗೆಯವರು ವಿರೋಧ ಪಕ್ಷದಲ್ಲಿದ್ದಾಗ ಎಲ್ಲವನ್ನೂ ಹೇಳಿದ್ದಾರೆ. ಮಾನ್ಯ ಖರ್ಗೆಯವರು ವಿರೋಧ ಪಕ್ಷದಲ್ಲಿದ್ದಾಗ ನಮ್ಮ ಕಡೆಯಿಂದ ಅವರಿಗೆ ಕಿಂಚಿತ್ತಾದರೂ ಅನಾನುಕೂಲವಾಗಿದೆಯೇ? ಎಂಬುದನ್ನು ಅವರಿಗೇ ಕೇಳಿ ನೋಡಿ.....

(ಗೊಂದಲ)

ಅಧ್ಯಕ್ಷರು : ನಾನು ಯಾರ ಹೆಸರನ್ನು ಕರೆದು ಮಾತನಾಡಲು ಅನುಮತಿ ಕೊಡುತ್ತೇನೋ ಅಂತಹವರು ಮಾತನಾಡಿದ್ದನ್ನು ಮಾತ್ರ ವರದಿಗಾರರು ದಾಖಲೆ ಮಾಡಿಕೊಳ್ಳಿ. ಎಲ್ಲರೂ ಒಟ್ಟಿಗೇ ನಿಂತು ಮಾತನಾಡಿದರೆ ಅದನ್ನು ದಾಖಲಿಸಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸನ್ಮಾನ್ಯ ಅಧ್ಯಕ್ಷರೆ, ಈಗ ವಸ್ತುಸ್ಥಿತಿ ಏನಾಗಿದೆ ಎಂದರೆ, ನಾವು ನಾಮಕಾವಸ್ಥೆಗೆ ಆಶ್ರಯ ಕಮಿಟಿಯ ಅಧ್ಯಕ್ಷರುಗಳು ಆಗಿದ್ದೇವೆ. ಗ್ರಾಮ ಸಭೆಗಳನ್ನು ನಡೆಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕಾಗುವುದಿಲ್ಲ ಎಂಬುದು ಪ್ರಾಕ್ಟಿಕಲ್ಲಾಗಿ ನಿಮಗೂ ಮತ್ತು ನಮಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಗ್ರಾಮಸಭೆಗಳನ್ನೇ ಅಕ್ಚುಯಲ್ಲಾಗಿ ನಡೆಸುವುದಕ್ಕಾಗುವುದಿಲ್ಲ. ಗ್ರಾಮಸಭೆಗಳು ಎಂದರೆ ಯಾವ ಮಟ್ಟಕ್ಕೆ ಇಳಿದಿದೆ ಎಂದರೆ ಆ ಸಭೆಗೆ ಗ್ರಾಮ ಪಂಚಾಯಿತಿ ಮೆಂಬರ್‌ಗಳು ಮಾತ್ರ ಬರುತ್ತಾರೆ. ಇದು ಈಗ ಗ್ರಾಮಸಭೆಗಳು ನಡೆಯುತ್ತಿರತಕ್ಕಂಥ ಪದ್ಧತಿಯಾಗಿದೆ. ತಮ್ಮ ಸರ್ಕಾರ ಮೊದಲನೇ ಬಾರಿಗೆ ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಮತ್ತು ಪರಿಶಿಷ್ಟ ನ್ಯಾಯದ ದೃಷ್ಟಿಯಿಂದ ನಾವು ಅಧಿಕಾರದಲ್ಲಿದ್ದಾಗ ಏನೊಂದು ಆರ್ಡರ್ ಅನ್ನು ಮಾಡಿದ್ದೆವೋ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿರತಕ್ಕಂಥಾದ್ದು ಸ್ವಾಗತಾರ್ಹ. ಅದನ್ನು ನಾವು ಒಪ್ಪುತ್ತೇವೆ. ಸರ್ಕಾರ ಬಹುಮತದ ತೀರ್ಮಾನ ಮಾಡಬೇಕೆಂದು ಹೇಳಿದೆ. ಆದರೆ 80 ಜನ ಶಾಸಕರುಗಳಿಗೆ ಸಮಿತಿಯಲ್ಲಿ ಬಹುಮತ ಇಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ಸಮಿತಿ ಇಂತಹ ಫಲಾನುಭವಿಗಳನ್ನೇ ಆಯ್ಕೆ ಮಾಡಿದೆ ಎಂದು ಹೇಳಲಾಗುತ್ತದೆ. ಆದರೆ ನಮಗೆ ಅಲ್ಲಿ ಏನೂ ಸಹಿತ ಅಧಿಕಾರ ಇರುವುದಿಲ್ಲ. ಇದರ ಬದಲಾಗಿ ನೀವು ನಾವು ಆಡಳಿತ ಪಕ್ಷದವರನ್ನೇ ಅದಕ್ಕೂ ಸಹಿತ ಅಧ್ಯಕ್ಷರನ್ನಾಗಿ ಮಾಡಿಕೊಳ್ಳುತ್ತೇವೆ ಎನ್ನುವುದಾದರೆ ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ವಸ್ತುಸ್ಥಿತಿಯನ್ನು ಹೇಳಿದರೆ ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಅನೇಕ ಕಡೆಗಳಲ್ಲಿ ಆಡಳಿತ ಪಕ್ಷದ ಶಾಸಕರು ಆಶ್ರಯ

ಸಮಿತಿಯ ಅಧ್ಯಕ್ಷರು ಆಗಿರತಕ್ಕಂಥ ಕಡೆಗಳಲ್ಲೂ ಸಹಿತ ದೂರುಗಳು ಬಂದಿರತಕ್ಕದ್ದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಏಕೆ ಈ ರೀತಿಯ ದೂರುಗಳು ಬಂದಿವೆ? ಇದು ತಮಗೂ ಕೂಡ ಗೊತ್ತಿದೆ. ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ದೂರುಗಳಿವೆ. ಇರುವವರೇ ಮನೆಗಳನ್ನು ತೆಗೆದುಕೊಳ್ಳುತ್ತಾರೆ. ನಾವೆಲ್ಲಾ ರಾಜೀನಾಮೆ ಕೊಡುತ್ತೇವೆ. ನಾವು ಆಶ್ರಯ ಸಮಿತಿಗಳಲ್ಲಿ ಇರುವುದಕ್ಕೆ ತಯಾರಿಲ್ಲ. ಇದರ ಬಗ್ಗೆ ನಮ್ಮದು ಖಚಿತವಾದ ನಿರ್ಧಾರವಾಗಿದೆ. ನಾವು ಆ ಸಮಿತಿಗಳಲ್ಲಿ ಇರಬೇಕು, ವಿರೋಧ ಪಕ್ಷದವರಿಗೂ ಸಹಿತ ಮನ್ನಣೆ ಸಿಗಬೇಕು ಅನ್ನುವುದಾದಲ್ಲಿ 'ಬಹುಮತ' ಅನ್ನುವುದನ್ನು ತಾವು ತೆಗೆದು ಹಾಕಬೇಕು. ಅದನ್ನು ತೆಗೆದು ಹಾಕಿದರೆ ಎಲ್ಲಾ ಸರಿ ಹೋಗುತ್ತದೆ.

ಅಧ್ಯಕ್ಷರು : ಮಾನ್ಯ ಖರ್ಗೆಯವರಲ್ಲಿ ನನ್ನದೊಂದು ವಿನಂತಿ ಇದೆ. ನನ್ನ ಅಭಿಪ್ರಾಯದಲ್ಲಿ ನಿಜಕ್ಕೂ ಇದೊಂದು ಸಮಸ್ಯೆಯಾಗಿದೆ. ಅದನ್ನು ಸರ್ಕಾರ ಯಾವುದೇ ರೀತಿಯಲ್ಲಾದರೂ ಸಾಲ್ವ್ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್ ಅವರೂ ಕೂಡ ಹಿಂದಿನ ವಿಧಾನಸಭೆ ಸದಸ್ಯರಾಗಿದ್ದರು. ಮಾನ್ಯ ಸಿಂಧ್ಯಾ ಮತ್ತು ಮಾನ್ಯ ಭೈರೇಗೌಡರು ಈ ಕಡೆ ಕುಳಿತಿದ್ದರು. ನಾವು ಆ ಕಡೆ ಇದ್ದಾಗ ಈ ಆಶ್ರಯ ಕಮಿಟಿಗಳಲ್ಲಿ ಎಂ.ಎಲ್.ಎ.ಅನ್ನು ಏಕೆ ಮೆಂಬರ್ ಮಾಡಿಲ್ಲ ಎಂದು ಹೋರಾಟ ಮಾಡಿದ್ದೇವೆ. ಇವತ್ತು ನಾವು ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದರೂ ಕೂಡ, ನಿಮ್ಮ ಸರ್ಕಾರ ಹೀಗೆ ಮಾಡಿದೆ ಎಂದು ಇವತ್ತು ನೀವು ಹೇಳುತ್ತೀದ್ದೀರಿ. ಎಂ.ಎಲ್.ಎ.ಗಳನ್ನು ಆಶ್ರಯ ಕಮಿಟಿಯಿಂದ ಹಿಂದಿನ ಸರ್ಕಾರದವರು ತೆಗೆದು ಹಾಕಿದ್ದರು. ಅದಕ್ಕಾಗಿ ಇಲ್ಲಿ ಹೋರಾಟ ನಡೆದ ಮೇಲೆ ಪುನಃ ಅದು ರೆಸ್ಟೋರ್ ಆಯಿತು. ನಾನು ಇವತ್ತಿಗೂ ಸಹಿತ ನನ್ನ ಕ್ಷೇತ್ರದಲ್ಲಿ ಸದರಿ ಸಮಿತಿಯ ಅಧ್ಯಕ್ಷನಾಗಿಲ್ಲ. ಎಂ.ಎಲ್.ಎ.ಗಳು ಹಿಂದಿನಿಂದಲೂ ಆಶ್ರಯ ಸಮಿತಿಗಳಲ್ಲಿದ್ದಾರೆ, ಆದ್ದರಿಂದ ಅವರನ್ನೂ ಕಮಿಟಿಯ ಮೆಂಬರ್‌ನ್ನಾಗಿ ಮಾಡಬೇಕು ಎನ್ನುವುದಕ್ಕಾಗಿ ಇಲ್ಲಿ ಹೋರಾಟ ನಡೆಯಿತು. ಇವತ್ತು ಏನೂ ಹೋರಾಟ ಮಾಡಬೇಕು ಎನ್ನುವುದಕ್ಕಾಗಿ ಇಲ್ಲಿ ಹೋರಾಟ ನಡೆಯಿತು. ಇವತ್ತು ಏನೂ ಹೋರಾಟ ಇಲ್ಲದೆಯೇ ಯಥಾಸ್ಥಿತಿಯಲ್ಲೇ ನಾವು ಒಪ್ಪಿಕೊಂಡು ಎಂ.ಎಲ್.ಎ.ಗಳನ್ನೇ ಆಶ್ರಯ ಸಮಿತಿಗಳ ಅಧ್ಯಕ್ಷರನ್ನಾಗಿ ಮಾಡಿ ಕಾನ್ಸೆಸ್‌ಸನ್ ಮೇಲೆ ನೀವು ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳಿದಾಗ, ಒಂದು ವೇಳೆ ಕಾನ್ಸೆಸ್‌ಸನ್ ಬರದೇ ಇದ್ದರೆ ಅದಕ್ಕೆ ಏನಾದರೂ ಒಂದು ಉಪಾಯ ಬೇಕಲ್ಲವೇ? ಎಂದು ಯೋಚಿಸಿ ಸಮಿತಿಯ ನಿರ್ಣಯ ಕಾನ್ಸೆಸ್‌ಸನ್ ಮೇಲೆ ಅಂಗೀಕಾರವಾಗದೇ ಇದ್ದಾಗ ಮೆಜಾರಿಟಿ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಆಶ್ರಯ ಸಮಿತಿಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಅಲ್ಲದೇ ಜನತಾ ದಳದವರನ್ನು ನಾಮಿನೇಟ್ ಮಾಡಬೇಕಾಗಿತ್ತೇ? ತಾವು ಅಧಿಕಾರದಲ್ಲಿದ್ದಾಗ ನಾವು ವಿರೋಧ ಪಕ್ಷದಲ್ಲಿದ್ದಾಗ ನೀವು ನಮ್ಮ ಪಕ್ಷದ ಸದಸ್ಯರನ್ನು ಸಮಿತಿಗಳಿಗೆ ನಾಮಿನೇಟ್ ಮಾಡಿದ್ದೀರಾ? ನಾವು ಯಾರೂ ಕೂಡ ನಿಮ್ಮಲ್ಲಿ ಬಂದಿಲ್ಲ, ಕೇಳಿಲ್ಲ, ಆ ಸಮಿತಿಗಳಿಗೆ ನಮ್ಮವರನ್ನು ಹಾಕಿಸಿಕೊಂಡಿಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದೆ. ನಮ್ಮ ಸರ್ಕಾರ ಅಧಿಕಾರದಲ್ಲಿರುವಾಗ ನಮ್ಮ ಪಕ್ಷದವರನ್ನೇ ನಾವು ಸಮಿತಿಯ ಸದಸ್ಯರುಗಳನ್ನಾಗಿ ಮಾಡುತ್ತೇವೆ. ನಾವು ನಿಮ್ಮ ಪಕ್ಷದವರನ್ನು ಸದಸ್ಯರುಗಳನ್ನಾಗಿ ಮಾಡುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ

ಸ್ವಾಭಾವಿಕವಾಗಿ ಯಾರಿಗೆ ಅಧಿಕಾರ ಇರುತ್ತದೋ ಅವರ ಪಕ್ಷದವರನ್ನೇ ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ. ನಾಳೆ ನಿಮಗೆ ಅಧಿಕಾರ ಸಿಕ್ಕಾಗ ನಿಮ್ಮ ಪಕ್ಷದವರನ್ನೆ ಸದಸ್ಯರನ್ನಾಗಿ ಮಾಡಿಕೊಳ್ಳಬಹುದು....

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾವು ಹೈಕೋರ್ಟ್‌ನಿಂದ ಆದೇಶ ತೆಗೆದುಕೊಂಡು ಬಂದಿದ್ದೇವೆ. ನಮ್ಮ ಪಕ್ಷದವರನ್ನೇ ಸದಸ್ಯರುಗಳನ್ನಾಗಿ ಮಾಡುತ್ತೇವೆ ಎಂದು ನೀವು ಹೇಳುವುದಾದಲ್ಲಿ ನಮ್ಮ ಪಕ್ಷದವರಿಗೆ ನಾವು ಮನೆಗಳನ್ನು ಕೊಡುವುದು ಎಂದು ನೀವು ಆರ್ಡರ್ ಮಾಡಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಕೇಂದ್ರದಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದ ಕೂಡಲೆ ಸೆಂಟ್ರಲ್ ಸಿಲ್ಕ್ ಬೋರ್ಡ್‌ಗೆ ಯಾರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು? ಅವರ ಪಾರ್ಟಿಯವರನ್ನು ಮಾಡಿದರೋ ಅಥವಾ ನಮ್ಮ ಪಾರ್ಟಿಯವರನ್ನು ಮಾಡಿದರೋ? ಎಲ್ಲಾ ಕಡೆಯಲ್ಲೂ ಕೂಡ ಪ್ರಜಾಪ್ರಭುತ್ವದಲ್ಲಿ ಯಾರ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುತ್ತದೋ ಆ ಪಕ್ಷದವರೇ ಸಮಿತಿಗಳಲ್ಲಿ ಸದಸ್ಯರಾಗುತ್ತಾರೆ. ಅದಕ್ಕಾಗಿ ಈ ಬಗ್ಗೆ ನೀವು ವಿರೋಧ ಮಾಡುವುದು ಬೇಡ. ನೀವು ಕೆಲವು ದಿವಸ ಕಾದು ನೋಡಿ, ನೀವು ಅಧಿಕಾರಕ್ಕೆ ಬಂದಾಗ ನಿಮ್ಮವರನ್ನೇ ನಾಮಿನೇಟ್ ಮಾಡುವಿರಂತೆ. ಈಗ ನಮ್ಮ ಪಕ್ಷದವರಿಗೆ ಸದಸ್ಯರಾಗಲು ಅವಕಾಶ ಸಿಕ್ಕಿದೆ. ಅವರು ಕೆಲಸ ಮಾಡಲು ಅವಕಾಶ ಕೊಡೋಣ. ಪ್ರತಿ ಹಳ್ಳಿಗಳಲ್ಲಿರುವ ಬಡವರುಗಳಲ್ಲೇ ನಾವು ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಈ ರೀತಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸ್ವಾಭಾವಿಕವಾಗಿ ಇವತ್ತು ಒಂದು ಹಂತದಲ್ಲಿ ಕೆಲವು ಜನ ಬಡವರಿಗೆ ಮಾತ್ರ ಮನೆಗಳು ಸಿಕ್ಕಿರಬಹುದು. ಇನ್ನೊಂದು ಹಂತದಲ್ಲಿ ಉಳಿದವರಿಗೂ ಕೂಡ ಮನೆಗಳು ಸಿಗುತ್ತವೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಲ್ಲವೇ? ಲ್ಯಾಂಡ್ ಟ್ರಿಬ್ಯೂನಲ್‌ಗಳಲ್ಲಿ ಕೂಡ ಭೂಮಿಗೆ ಸಂಬಂಧಪಟ್ಟ ನಿರ್ಣಯಗಳನ್ನು ಕಾನೂನು ಮತ್ತು ಬಹುಮತದ ಆಧಾರದ ಮೇಲೆಯೇ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಇಲ್ಲಿಯವರತಗೂ ಕೂಡ ಮಾನ್ಯ ಖರ್ಗೆಯವರು ಉತ್ತರ ಕೊಟ್ಟಿದ್ದಾರೆ. ನೀವು ಹ್ಯಾಗೆ ಮಾಡಿದ್ದೀರಿ? ಎಂದು ಅವರು ನಮ್ಮ ಕಡೆ ಕೈ ತೋರಿಸಿ ಕೇಳಿದ್ದಾರೆ. ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ ಮಾನ್ಯ ಖರ್ಗೆಯವರು ಹೇಳಿದಂತೆ ಪ್ರಾರಂಭದಲ್ಲಿ ಕೆಲವು ದಿವಸ ಈ ಸದನದ ಸದಸ್ಯರು ಆಶ್ರಯ ಸಮಿತಿಯ ಅಧ್ಯಕ್ಷರಾಗಿಲ್ಲದೇ ಇದ್ದುದು ನಿಜ. ಆಮೇಲೆ ವಿರೋಧ ಪಕ್ಷದವರು ಒತ್ತಾಯ ಮಾಡಿದ್ದು ನಿಜ. ಮಾನ್ಯ ಖರ್ಗೆಯವರು ವಿರೋಧ ಪಕ್ಷದಲ್ಲಿದ್ದಾಗ ಏನೆಲ್ಲಾ ಮಾಡಬೇಕೆಂದು ಹೇಳಿದ್ದರೋ ಅದನ್ನೆಲ್ಲಾ ನಾವು ಒಪ್ಪಿ ಕಾರ್ಯಗತ ಮಾಡಿದ್ದೇವು. ಈಗ ಮಾನ್ಯ ಖರ್ಗೆಯವರು ಸೇಡಿನ ರಾಜಕೀಯಕ್ಕೆ ಉತ್ತೇಜನ ಕೊಡತಕ್ಕಂಥ ರೀತಿಎಲ್ಲಿ ಈ ನಡವಳಿಕೆಗಳು ಕಾರ್ಯಗತವಾಗುತ್ತಿದೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಖರ್ಗೆಯವರೇ, ಒಂದು ಕೆಲಸ ಮಾಡಿ. ವಿರೋಧ ಪಕ್ಷದ ನಾಯಕರುಗಳು ಯಾರ್ಯಾರಿದ್ದಾರೋ ಅವರುಗಳನ್ನು ಕರೆಸಿ ಈ ಬಗ್ಗೆ ಮಾತನಾಡಿ ಏನಾದರೂ ಒಂದು ಪರಿಹಾರ ಕಂಡುಹಿಡಿಯಿರಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇಲ್ಲಿರತಕ್ಕಂತಹ ಮಾನ್ಯ ಸದಸ್ಯರು ಎಂಟರಿಂದ ಹತ್ತು ಲಕ್ಷದ ಜನಸಂಖ್ಯೆಯ ಮತ ಕ್ಷೇತ್ರದಿಂದ ಆಯ್ಕೆಯಾಗಿ ಬಂದವರು ಇದ್ದಾರೆ. ಇವರಿಗೆ ಅಲ್ಲಿ ಕೂರಿಸಿ ಇನ್ನು ನಾಲ್ಕು ಜನರಿಗೆ ನಾಮಕರಣ ಮಾಡಿ.....

Mr. SPEAKER : We will take it up for half-an-hour discussion. ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿರುವುದರಿಂದ ನಾವು ಅರ್ಧ ಗಂಟೆ ಚರ್ಚೆಗೆ ಹಾಕೋಣ.

ಶ್ರೀ ಸಿ. ಬೈರೇಗೌಡ : ಈಗ ಇತ್ಯರ್ಥ ಆಗದಿದ್ದರೆ ಈ ಭಾಗದಲ್ಲಿರತಕ್ಕಂತಹವರು ನಾವು ಯಾರೂ ಕೂಡ ಆ ಸಮಿತಿಯಲ್ಲಿ ಕೆಲಸ ಮಾಡುವುದಕ್ಕೆ ತಯಾಗಿಲ್ಲ. ನಾವೆಲ್ಲಾ ಒಟ್ಟಿಗೆ ರಾಜೀನಾಮೆ ಕೊಡುತ್ತೇವೆ. ಇದನ್ನು ನಾವು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ತಾವು ಪರಿಶೀಲಿಸಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಕೆಲವು ಸಮಿತಿಗಳಲ್ಲಿ ಈ ಹಿಂದೆ ಇದ್ದ ಸರ್ಕಾರ ತನ್ನದೇ ಆದ ಸದಸ್ಯರನ್ನು ನೇಮಿಸಿದ್ದರು ಅಥವಾ ಇಲ್ಲ ಎನ್ನುವುದರ ಬಗ್ಗೆ ಅವರು ಹೇಳಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದು ಬಂದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾವು ಏಕಪಕ್ಷೀಯವಾಗಿ ಇಲ್ಲಿ ಮಾತನಾಡುವುದಕ್ಕೆ ತಯಾರಿಲ್ಲ. ಆಶ್ರಯ ಸಮಿತಿಯ ವಿಚಾರದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಕೊಡಬೇಕೆಂದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸರ್ಕಾರ ಮಾಡಿರತಕ್ಕಂತಹ ಅಜ್ಜೆ ಸರಿ ಇದೆ ಎಂದು ನಾನು ಸ್ವಾಗತ ಮಾಡಿದ್ದೇನೆ. ಇದು ನಮ್ಮ ನಿರ್ಧಾರ, ಯಾವುದೇ ಕಾರಣದಿಂದ ನಾವು ಆಶ್ರಯ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡುವುದಕ್ಕೆ ತಯಾರಿಲ್ಲ, ನಾವು ರಾಜೀನಾಮೆ ಕೊಡುತ್ತೇವೆ. ತಾವು ಅರ್ಧ ಗಂಟೆ ಚರ್ಚೆಗೆ ಈ ವಾರದಲ್ಲಿಯೇ ಅವಕಾಶ ಮಾಡಿ ಕೊಡುವುದಾದಲ್ಲಿ ನಾವು ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು : ನಾನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತೇನೆಂದು ಹೇಳಿದ ಮೇಲೆ ಮತ್ತೆ ಚರ್ಚೆ ಬೇಡ.

ಶ್ರೀ ಸಿ. ಬೈರೇಗೌಡ : ಬೆಳಗಾಂ ಜಿಲ್ಲೆಯಲ್ಲಿ ನಾಳೆ ದಿವಸ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಇದೇ ವಿಚಾರದಲ್ಲಿ ಸಭೆ ಕರೆದಿದ್ದಾರೆ. ಆದ್ದರಿಂದ ಇದು ತುರ್ತಾಗಿ ತೀರ್ಮಾನವಾಗಬೇಕಾಗಿದೆ. ಇಲ್ಲದಿದ್ದರೆ ನಾಳೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆ ಜಿಲ್ಲೆಯಲ್ಲಿ ಐದು ಜನ ಶಾಸಕರು ನಮ್ಮ ಪಕ್ಷದವರಿದ್ದಾರೆ. ಅವರೆಲ್ಲ ಅಲ್ಲಿ ಮೂಕ ಪ್ರೇಕ್ಷಕರಾಗಿ ಆ ಸಭೆಯಲ್ಲಿ ಇರಬೇಕಾಗುತ್ತದೆ. ವಿಷಯದ ತೀವ್ರತೆಯಿಂದ ಸರ್ಕಾರ ಹೇಳಬೇಕು. ಇಲ್ಲಿ ಇತ್ಯರ್ಥವಾಗುವವರೆಗೆ ನಾಳೆ ಕರೆದಿರತಕ್ಕಂತಹ ಸಭೆ ಮುಂದೆ ಹಾಕುವ ವ್ಯವಸ್ಥೆ ಮಾಡಿ.

ಶ್ರೀ ಖಮರುಲ್ ಇಸ್ಲಾಂ : ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ, ಯಾವತರಹ ಸೆಲೆಕ್ಟ್ ಮಾಡಬಹುದು, ಯಾವ ತರಹ ಐಡೆಂಟಿಫೈ ಮಾಡಬೇಕು ಎಂದು. According to the Constitutional spirit, Grama Sabha is mandatory, after the amendment

of the constitution. Selection committee has powers to see that ineligible candidates should not be selected. All sections should be given proportional representation. So, the basic identifying authority is the Grams Sabha. Suppose, there is no consensus, then who has to select? I am not going toweaken the norms of democracy.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರು ಆಗುವುದೇ ಇಲ್ಲವೆಂದು ಹೇಳುತ್ತಿದ್ದಾರೆ, ತಾವು ಅರ್ಧ ಗಂಟೆ ಚರ್ಚೆಗೆ ಇಟ್ಟುಕೊಂಡಿದ್ದೀರಿ.

Mr. SPEAKER : I have allowed it for half an hour discussion. ಸರ್ಕಾರದಿಂದ ಏನು ಉತ್ತರ ಬರುತ್ತದೆ ನೋಡೋಣ.

ಶ್ರೀ ಸಿ. ಬೈರೇಗೌಡ : ಬೆಳಗಾಂನಲ್ಲಿ ನಾಳೆ ದಿವಸ ಸಭೆ ಕರೆದಿದ್ದಾರೆ. ಆ ಸಭೆಯನ್ನು ಮುಂದೆ ಹಾಕಿಸಿ, ನಾಳೆ ಏನಾದರೂ ತೀರ್ಮಾನವಾದರೆ ಹೇಗೆ?

Mr. SPEAKER : I will talk tc the Minister, not on the floor of the House. ಮಾನ್ಯ ಮಂತ್ರಿಗಳಿಗೆ ನಮ್ಮ ಕಛೇರಿಯಲ್ಲಿ ಕರೆಸಿ ಮಾತನಾಡುತ್ತೇನೆ.

ಬೆಂಗಳೂರು ನಗರದ ಸುತ್ತಮುತ್ತಲಿನ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿರುವುದು

59 (372) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ನಗರದ ಸುತ್ತಮುತ್ತಲಿನ ಸರ್ಕಾರಿ ಜಮೀನನ್ನು ಭೂ ಕಬಳಿಕೆದಾರರಿಂದ ರಕ್ಷಿಸಲು ಕಷ್ಟವಾದ್ದರಿಂದ ಈ ಜಮೀನನ್ನು ಬಹಿರಂಗ ಹರಾಜಿನಲ್ಲಿ ವಿಲೇಮಾರಿ ಮಾಡುವಂತಹ ವಿಶೇಷ ಜಿಲ್ಲಾಧಿಕಾರಿಗಳು ಈ ಹಿಂದೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಆ) ಈ ಸರ್ಕಾರಿ ಜಮೀನಿನಲ್ಲಿ ದಿನ ನಿತ್ಯವೂ ಅಕ್ರಮ ಕಟ್ಟಡಗಳು ನಿರ್ಮಾಣವಾಗುವುದನ್ನು ತಡೆಗಟ್ಟಲಾಗುತ್ತಿದೆಯೇ ಹಾಗೂ ಈಗಾಗಲೇ ಅಕ್ರಮವಾಗಿ ನಿರ್ಮಿಸಲಾಗಿರುವ ಕಟ್ಟಡಗಳನ್ನು ತೆರವುಗೊಳಿಸಲಾಗುವುದೆ;

ಇ) ಈ ಸರ್ಕಾರಿ ಜಮೀನುಗಳ ಸಂಬಂಧ ನ್ಯಾಯಾಲಯದಲ್ಲಿರುವ ಜಮೀನುಗಳ ವಿವರ ಹಾಗೂ ಅವುಗಳು ಎಷ್ಟು ಎಷ್ಟು ವರ್ಷಗಳಿಂದ ನ್ಯಾಯಾಲಯಗಳಲ್ಲಿವೆ ಮತ್ತು ಅವುಗಳ ಇತ್ಯರ್ಥಕ್ಕೆ ಸರ್ಕಾರ ಯಾವುದಾದರೂ ವಿಶೇಷ ಕ್ರಮ ಕೈಗೊಂಡಿದೆಯೇ;

ಈ) ಈ ಸರ್ಕಾರಿ ಜಮೀನುಗಳನ್ನು ಹರಾಜು ಮಾಡಿದಲ್ಲಿ ಸರ್ಕಾರಕ್ಕೆ ಅಂದಾಜು ಎಷ್ಟು ಕೋಟಿ ಆದಾಯ ಬರಬಹುದು ವಿವರಗಳೊಂದಿಗೆ ತಿಳಿಸುವುದು;